

ನೀಡಿ ಅಲೆಗಳು ಬಂಡೆಗಳಿಗೆ ಅಪ್ಪಳಿಸಿ ಚೂರು ಚೂರಾಗುವುದನ್ನು ನೋಡುತ್ತಿದ್ದ.

ಹೊಸ ದಂಪತಿಗಳು ಹರಕೆ ತೀರಿಸಲು ಬಂದರೆ ವಧುವನ್ನು ನೋಡಿ ಶಕೀಲಾಳನ್ನು ನೆನಪಿಸಿಕೊಂಡು ದುಃಖ ಪಡುತ್ತಿದ್ದ.

ಉಳಿದ ಮುಜಾವರ್‌ಗೆಳಲ್ಲ ಮಲಗಿಕೊಂಡಿರುವಾಗ ಸಲೀಂ ಮುಂಜಾನೆ ಎದ್ದು ದರ್ಗಾದ ಹೊರಗೆ ಆವರಣದಲ್ಲಿ ಬಿದ್ದಿರುವ ಕಸ ಗುಡಿಸುತ್ತಿದ್ದ.

ಅದೊಂದು ದಿನ ಸಲೀಂ ಸಮುದ್ರದ ಕಡೆ ಹೋಗಿ ಬರುತ್ತಿರುವಾಗ ಅಚಾನಕ್ಕಾಗಿ ಅವನ ದೃಷ್ಟಿ ಗುಂಪೊಂದರ ಮೇಲೆ ಹೋಯಿತು. ಅವರೆಲ್ಲರೂ ಪರಿಚಿತ ಮುಖಗಳೇ ಆಗಿದ್ದರು. ಅವರಲ್ಲಿ ರಸೂಲ್ ಸಹ ಇದ್ದ. ಅವನೇ ಎಲ್ಲರಿಗಿಂತ ಮುಂದಿದ್ದ. ಅವನ ಎರಡೂ ಕೈಗಳನ್ನು ಕಟ್ಟಲಾಗಿತ್ತು. ಅವನು ಓಡಿ ಹೋಗಲು ಪ್ರಯತ್ನಿಸುತ್ತಿದ್ದ. ಇಬ್ಬರು ಅವನ್ನು ಹಿಡಿದು ಕೊಂಡಿದ್ದರು. ಅವನು ಆಗಾಗ ಜೋರಾಗಿ ಕಿರುಚಿಕೊಳ್ಳುತ್ತಿದ್ದ.

ಸಲೀಂ ಆ ಗುಂಪಿನವರ ಕಣ್ಣಿಗೆ ಬೀಳಬಾರದೆಂದು ಕೂಡಲೇ ಮರೆಯಾಗಿ ಹೋದ.

ಒಂದು ವೇಳೆ ನಾನೇನಾದರೂ ರಸೂಲ್‌ನನ್ನು ಕೊಂದಿದ್ದರೆ ಅವನು ಒಂದೇ ಏಟಿಗೆ ಸುತ್ತು ಹೋಗುತ್ತಿದ್ದ. ಈಗವನು ನರಳಿನರಳಿ ಸಾಯುತ್ತಾನೆ. ಇದಕ್ಕಿಂತ ದೊಡ್ಡ ಶಿಕ್ಷೆ ಮತ್ತೊಂದಿಲ್ಲ ಎಂಬ ಯೋಚನೆ ಸುಳಿಯಿತು.

ಹಿರಿಯ ಮುಜಾವರ್ ರಸೂಲ್‌ನನ್ನು ಸಮಾಧಿ ಮುಂದೆ ಕೂರಲು ಹೇಳಿದರು. ಅವನು ನಿರಾಕರಿಸಿದಾಗ, ನಾಲ್ಕಾರು ಮಂದಿ ಕೂರಿಸಿದರು. ಮುಜಾವರ್ ಛಡಿಯಿಂದ ನಾಲ್ಕಾರು ಬಾರಿ ಬಾರಿಸಿದರು. ಅವನು ಸುಸ್ತಾಗಿ ಹೋಗಿ ಮೌನ ಧರಿಸಿಕೊಂಡ. ಆಮೇಲೆ ಮುಜಾವರ್ ಲೋಬಾನ್ ಹೊಗೆ ಹಾಕಿ, ನವಿಲುಗರಿ ಚಾಮರದಿಂದ ಅವನ ಮುಖಕ್ಕೇ ಝುಳಪಿಸಿದರು.

ರಸೂಲ್‌ನ ಕಡೆಯವರು ಮಾರನೇ ದಿನ ರಸೂಲ್‌ನನ್ನು ಕರೆದುಕೊಂಡು ಮರಳಿ ಹೋದರು.

ಸಲೀಂ ದರ್ಗಾದ ಆವರಣದಲ್ಲಿ ಬೆಳೆದಿರುವ ಹೂವಿನ ಗಿಡಗಳಿಂದ ನಾಲ್ಕಾರು ಹೂಗಳನ್ನು ಕಿತ್ತುಕೊಂಡು ಸಮುದ್ರದ ದಂಡಕ್ಕೆ ತಲುಪಿ, ಎತ್ತರವಾದ ಬಂಡೆಯೊಂದರ ಮೇಲೆ ನಿಂತುಕೊಂಡು ಹೂಗಳನ್ನು ಜೋರಾಗಿ ಸಮುದ್ರದ ಮಧ್ಯಕ್ಕೆ ಎಸೆದ. ಆದರೆ, ಸಮುದ್ರ ಹೂಗಳನ್ನು ಸ್ವೀಕರಿಸಲಿಲ್ಲ. ಅಲೆಗಳು ತಂದು ದಡಕ್ಕೆ ಬಿಸಾಕಿದವು. ಸಲೀಂ ಶುಭವಾಗಲಿ ಎಂದು ಶುಭ ಹಾರೈಸಿದ.

ಸಲೀಂ ಕೆಲವು ಸಮಯದವರೆಗೆ ಅಲ್ಲಿದ್ದು, ನಂತರ ದರ್ಗಾಕ್ಕೆ ಹೋಗಿ ಗಂಧದ ಕಡ್ಡಿ ಹೊತ್ತಿಸಿ, ಎರಡು ಕೈಗಳನ್ನು ಮೇಲೆತ್ತಿ ಊರಿನಲ್ಲಿ ಎಲ್ಲರೂ ಕ್ಷೇಮವಾಗಿರಲಿ, ತಾನು ಮನೆಗೆ ಹೋದಾಗ ಎಲ್ಲರೂ ನಗು ಮುಖದಿಂದ ಬರ ಮಾಡಕೊಳ್ಳಲಿ ಎಂದು ದುವಾ (ಪ್ರಾರ್ಥನೆ) ಮಾಡಿಕೊಂಡ.

ಸಲೀಂ ಊರಿಗೆ ಹಿಂತಿರುಗುವ ರಸ್ತೆಯಲ್ಲಿ ಆಕಾಶ ಮಲ್ಲಿಗೆಯ ಎತ್ತರವಾದ ಮರಗಳಿದ್ದವು. ಆಕಾಶ ಮಲ್ಲಿಗೆಯ ಹೂಗಳು ರಸ್ತೆಯಲ್ಲಿ ಚೆಲ್ಲಿಕೊಂಡಿದ್ದವು.

ಆಕಾಶ ಮಲ್ಲಿಗೆಯ ಹೂಗಳನ್ನು, ಆಕಾಶದಿಂದ ಶಕೀಲಾಳೇ ಉದುರಿಸುತ್ತಿರಬಹುದೆಂಬ ಅನುಮಾನ ಬಂತು ಸಲೀಂಗೆ. ●